ಹೊರಡುತ್ತಿತ್ತು. ಅವನು ಬಗ್ಗಿ ನೋಡಿದಾಗ ಕೊರಕಲಿನಲ್ಲಿ ಒಬ್ಬ ಮುದುಕ ನರಳುತ್ತಾ ಬಿದ್ದಿರುವುದು ಕಾಣಿಸಿತು. ಅಣ್ಣನು ಕೆಳಗಿಳಿದು ಆ ಮುದುಕನನ್ನು ಕೊರಕಲಿನಿಂದ ಮೇಲೆ ಎತ್ತಿ ತಂದ. ಮುದುಕನ ಕಾಲಿಗೆ ಪೆಟ್ಟಾಗಿ ದೈನ್ಯಾವಸ್ಥೆಯಲ್ಲಿದ್ದ. ಅಣ್ಣನು ಅವನಿಗೆ ಗಾಳಿ ಬೀಸಿ ಉಪಚಾರ ಮಾಡಿದ. ಅಲ್ಲೇ ಹತ್ತಿರದ ಕೆರೆಯಿಂದ ನೀರು ತಂದು ಕುಡಿಸಿದ. ಅವನ ಆರೈಕೆಯಿಂದ ಮುದುಕ ಕೊಂಚ ಸುಧಾರಿಸಿಕೊಂಡ. ಅವನು ಅಣ್ಣನಿಗೆ 'ಅಯ್ಯಾ! ನಾನೊಬ್ಬ ಸಿದ್ಧ ಸಾಧಕ. ನನಗೆ ನಡೆಯಲಿಕ್ಕೆ ಆಗದಷ್ಟು ನನ್ನ ಕಾಲಿಗೆ ಪೆಟ್ಟಾಗಿದೆ. ನೀನು ನನ್ನನ್ನು ನನ್ನ ಆಶ್ರಮದವರೆಗೆ ಒಯ್ದು ಬಿಡುವೆಯಾ? ನನ್ನ ಆಶ್ರಮ ಇಲ್ಲಿಗೆ ಸಮೀಪದಲ್ಲಿಯೇ ಇದೆ' ಎಂದು ದೀನಸ್ವರದಲ್ಲಿ ಕೇಳಿಕೊಂಡ, ಅಣ್ಣನು ಅವನನ್ನು ಕಷ್ಟಪಟ್ಟು ಕುದುರೆಯ ಮೇಲೇರಿಸಿ ಅವನ ಆಶ್ರಮಕ್ಕೆ ಬಿಟ್ಟ. ಮುದುಕನು ಅವನಿಗೆ ಅಲ್ಲೇ ಇರಲು ಹೇಳಿದ. ಅಣ್ಣ ಆ ಸಿದ್ಧ ಸಾಧಕನ ಆಶ್ರಮದಲ್ಲೇ ತಂಗಿದ್ದ.

ಹೀಗೆಯೇ ಒಂದು ವಾರ ಕಳೆಯಿತು. ಮುದುಕನ ಕಾಲು ಗುಣವಾಗಿ ಅವನು ನಡೆದಾಡುವಂತಾದ. ಅವನು ಅಣ್ಣನ ಪ್ರಯಾಣದ ಕಾರಣವನ್ನು ವಿಚಾರಿಸಿಕೊಂಡ. ಅಣ್ಣನು ತನ್ನ ಕಥೆಯನ್ನು ಮುದುಕನಿಗೆ ಹೇಳಿ, 'ಮುನಿಗಳೇ ನನಗೆ ಚೆನ್ನಾಗಿ ಹಣ ಗಳಿಸಿ ಶ್ರೀಮಂತನಾಗಿ ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುವ ಆಸೆ. ಅದನ್ನು ಪೂರೈಸಿಕೊಳ್ಳಲು ನಾನು ನಗರಕ್ಕೆ ಹೊರಟಿದ್ದೇನೆ' ಎಂದು ತನ್ನ ಆಸೆಯನ್ನು ವ್ಯಕ್ತಪಡಿಸಿದ. ಅದಕ್ಕೆ ಆ ಸಿದ್ಧ ಸಾಧಕನು ನಗುತ್ತಾ 'ನಾನೂ ಕೂಡ ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡುವ ಆಸೆಯಿಂದಲೇ ನಗರದಿಂದ ಈ ಕಾಡಿಗೆ ಬಂದು ನನ್ನ ತಪಸ್ಸಿನ ಸಾಧನೆಯಿಂದ ಅಪೂರ್ವವಾದ ವಸ್ತುವೊಂದನ್ನು ಸಿದ್ಧಿಸಿಕೊಂಡಿದ್ದೇನೆ. ಅದನ್ನು ನೋಡಿದರೆ ನೀನು ತುಂಬ ಆಶ್ಚರ್ಯಪಡುವೆ' ಎಂದು ನುಡಿದ.

ಅಣ್ಣನಿಗೆ ಕುತೂಹಲವಾಯಿತು. ಆ ಸಿದ್ಧ ಸಾಧಕನು ಮೂಲೆಯಲ್ಲಿ ನೇತಾಡಿಸಿದ್ದ ತನ್ನ ಜೋಳಿಗೆಯಿಂದ ಒಂದು ವಸ್ತುವನ್ನು ತಂದು ಅದನ್ನು ತನ್ನ ಅಂಗೈನಲ್ಲಿ ಹಿಡಿದು ತೋರಿಸಿದ. ಏನೆಂದು ನೋಡಿದರೆ ಅದೊಂದು ಅರಮನೆ! ಅಣ್ಣನಿಗೆ ನಿರಾಸೆ ಆಯಿತು ಅವನು 'ಮುನಿಗಳೇ, ನನ್ನನ್ನು ಮನ್ನಿಸಿರಿ. ಇದೊಂದು ಸಾಧಾರಣ ಅರಮನೆಯ ಗೊಂಬೆ! ಇದನ್ನು ಯಾವ ಸಾಮಾನ್ಯ ಗೊಂಬೆಯವನಿಗೆ ಹೇಳಿದರೂ ಮಾಡಿ ಕೊಡುತ್ತಾನೆ! ಇದರಲ್ಲಿ ಆಶ್ಚರ್ಯ ಪಡುವಂಥದು ಏನಿದೆಯೋ ನನಗೆ ಅರ್ಥವಾಗಲಿಲ್ಲ' ಎಂದು ನುಡಿದ.

ಅದಕ್ಕೆ ಆ ಮುದುಕನು 'ಇದು ಸಾಧಾರಣ ಗೊಂಬೆಯ ಅರಮನೆಯಲ್ಲ! ಇದರಲ್ಲಿ ಅರಮನೆಯಲ್ಲಿರುವಂತೆ ನೂರಾರು ಕೋಣೆಗಳಿವೆ. ಹಂಸ ತೂಲಿಕಾ ತಲ್ಪವಿರುವ ಶಯ್ಯಾಗೃಹಗಳಿವೆ. ಉದ್ಯಾನವನವಿದೆ. ಅತ್ಯುತ್ತಮ ಪಾಕಶಾಲೆಯಿದೆ. ಇವನ್ನೆಲ್ಲ ನೀನು ಅನುಭವಿಸಿ ಸುಖಿಸಬಹುದು. ಇದನ್ನು ಸಿದ್ಧ ಮಾಡಿಕೊಳ್ಳುವುದರಲ್ಲಿಯೇ ನನ್ನ ಬಹುಪಾಲು ಆಯುಷ್ಯ ಮುಗಿಯಿತು. ನಾನು ಕಾಯಕಲ್ಪದಿಂದ ನನ್ನ ಶರೀರವನ್ನು ದೃಢ ಮಾಡಿ ಬಹುಕಾಲ ಬದುಕುವ ಆಸೆಯಿಂದ ಗಿಡ ಮೂಲಿಕೆಯನ್ನು ಹುಡುಕುವಾಗ ಮಳೆ ಗಾಳಿ ಬಂದು ಕೊರಕಲಿಗೆ ಬಿದ್ದಿದ್ದೆ. ನೀನು ನನ್ನನ್ನು ಅಲ್ಲಿಂದ ಕಾಪಾಡಿದೆ. ಅದಕ್ಕಾಗಿ ನಾನು ಈ ಅಂಗೈ ಅರಮನೆಯ ಸುಖವನ್ನು ತೋರಿಸುತ್ತೇನೆ' ಎಂದು ನುಡಿದು ಅಂಗೈಯಲ್ಲಿರುವ ಅರಮನೆಯನ್ನು ಮುಟ್ಟಲು ಅಣ್ಣನಿಗೆ ಹೇಳಿದ. ಅಣ್ಣನು ಅಂಗೈಯಲ್ಲಿರುವ ಆ ಅರಮನೆಯನ್ನು ಮುಟ್ಟಿದ. ಏನಾಶ್ಚರ್ಯ! ಅಣ್ಣನು ಅರಮನೆಯ ಒಳಗೆ ಹೋಗಬಹುದಾದಷ್ಟು ಸಣ್ಣ ಗಾತ್ರದವನಾದ!

ಅಣ್ಣನು ಈಗ ಸುಲಭವಾಗಿ ಅರಮನೆಯ ಒಳಗೆ ಹೋದ. ಅದರೊಳಗೆ ಮುದುಕ ಹೇಳಿದಂತೆ ನೂರಾರು ಕೋಣೆಗಳಿದ್ದವು. ವಜ್ರ ವೈಢೂರ್ಯಗಳು ತುಂಬಿದ್ದವು. ಅರಮನೆಯಲ್ಲಿ ಪರಿಚಾರಕರು ಅಣ್ಣನನ್ನು ತುಂಬು ಗೌರವದಿಂದ ಒಳಗೆ ಕರೆದೊಯ್ದರು. ಭೋಜನ ಶಾಲೆಗೆ ಕರೆದೊಯ್ದು ಒಳ್ಳೆಯ ಭೋಜನ ಬಡಿಸಿದರು. ಶಯ್ಯಾಗೃಹಕ್ಕೆ ಕರೆದೊಯ್ದು ಹಂಸ ತೂಲಿಕಾ ತಲ್ಪದಲ್ಲಿ ವಿಶ್ರಾಂತಿ ಪಡೆಯಲು ಹೇಳಿ ಹೋದರು. ಅಣ್ಣನು ಸುಪ್ಪತ್ತಿಗೆಯಲ್ಲಿ ಮಲಗಿ ಸುಖಿಸುತ್ತಾ ಚೆನ್ನಾಗಿ ನಿದ್ದೆ ಮಾಡಿದ. ನಂತರ ಎದ್ದು ಇದೆಲ್ಲ ಕನಸೋ ಅಥವಾ ನನಸೋ ಎಂದೆಲ್ಲ ಯೋಚಿಸುತ್ತ ಅರಮನೆಯನ್ನು ಬಿಟ್ಟು ಹೊರಗಡೆಗೆ ಬಂದ. ಹಾಗೆ ಅಂಗೈಯಲ್ಲಿ ಅರಮನೆಯಿಂದ ಹೊರ ಬಂದ ತಕ್ಷಣ ಅವನಿಗೆ ತನ್ನ ಮೊದಲಿನ ರೂಪವು ಬಂದಿತು!

ಅವನು ಮಾತಾಡಲು ತಿಳಿಯದೆ ಗರ ಬಡಿದವನಂತೆ ಕುಳಿತುಬಿಟ್ಟ. ಮುದುಕ ಅವನನ್ನು ಎಚ್ಚರಗೊಳಿಸಿದ. ಅಣ್ಣನು 'ಇದು ನಿಜಕ್ಕೂ ಪರಮಾಶ್ಚರ್ಯ! ನಿಮ್ಮ ಸಿದ್ಧಿ ಸಾಧನೆ ಪರಮಾದ್ಭುತ!' ಎನ್ನುತ್ತ ಸಿದ್ಧ ಮುನಿಗೆ ಉದ್ದಂಡ ಪ್ರಣಾಮ ಮಾಡಿದ. ಮುನಿಯು 'ಇದು ಹಗಲು ಹೊತ್ತಿನಲ್ಲಿ ಅಂಗೈಯಲ್ಲಿ ಅರಮನೆಯಾಗಿರುತ್ತದೆ. ನೀನು ಚಿಕ್ಕ ಗಾತ್ರದಲ್ಲಿ ಅರಮನೆಯ ಒಳಗೆ ಹೋಗಬೇಕು. ರಾತ್ರಿಯ ಹೊತ್ತಿನಲ್ಲಿ ಇದನ್ನು ನೆಲದ ಮೇಲಿಟ್ಟರೆ ಇದು ದೊಡ್ಡ ಗಾತ್ರದ ಅರಮನೆಯಾಗುತ್ತದೆ. ನೀನು ಅದನ್ನು ನಿನ್ನ ಈ ರೂಪದಲ್ಲಿಯೇ ಪ್ರವೇಶಿಸಬಹುದು. ಅದನ್ನು ಈ ರಾತ್ರಿ ನಿನಗೆ ನಾನು ತೋರಿಸುತ್ತೇನೆ' ಎಂದು ನುಡಿದು ಅಂಗೈಯಲ್ಲಿನ ಅರಮನೆಯನ್ನು ಜೋಳಿಗೆಯ ಒಳಗೆ ಸೇರಿಸಿದ. ಅಣ್ಣನು ರಾತ್ರಿಯಾಗುವುದನ್ನು ಕಾಯುತ್ತಿದ್ದ.

ರಾತ್ರಿಯಾಯಿತು. ಆ ಸಿದ್ಧ ಮುನಿಯು ಅರಮನೆಯ ಗೊಂಬೆಯನ್ನು ತನ್ನ ಜೋಳಿಗೆಯಿಂದ ಹೊರತೆಗೆದು ಗುಡಿಸಲಿನ ಹೊರಗಡೆಗೆ ಬಂದ. ಅಲ್ಲಿ ಮುಂದಿನ ಬಯಲಲ್ಲಿ ಅರಮನೆಯ ಗೊಂಬೆಯನ್ನು ನೆಲದ ಮೇಲೆ ಇಟ್ಟ. ನೋಡ ನೋಡುತ್ತಲೇ ಅರಮನೆಯ ಗೊಂಬೆ ಬೃಹದಾಕಾರವಾಗಿ ಬೆಳೆದು ದೊಡ್ಡ ಅರಮನೆಯಾಗಿ ನಿಂತಿತು! ಸಿದ್ಧ ಮುನಿಯು ಅಣ್ಣನನ್ನು ತನ್ನ ಜೊತೆಗೆ ಕರೆದುಕೊಂಡು ಅರಮನೆಯ ಒಳಗೆ ಹೋದ. ಅಲ್ಲಿ ಇಬ್ಬರೂ ಬಗೆ ಬಗೆಯ ಭಕ್ಷ್ಯ ಭೋಜ್ಯಗಳನ್ನು ಊಟ ಮಾಡಿದರು. ನಂತರ ಅವರು ಬೇರೆ ಬೇರೆ ಕೋಣೆಗಳಲ್ಲಿ ಸುಪ್ಪತ್ತಿಗೆಯಲ್ಲಿ ಮಲಗಿ ಚೆನ್ನಾಗಿ ನಿದ್ದೆ ಮಾಡಿದರು. ಮರುದಿನ ಬೆಳಿಗ್ಗೆ ಇಬ್ಬರೂ ಅರಮನೆಯಿಂದ ಹೊರ ಬಂದರು. ಕೂಡಲೇ ಆ ಅರಮನೆಯು ಗಾತ್ರದಲ್ಲಿ ಚಿಕ್ಕದಾಗಿ ಗೊಂಬೆಯ ರೂಪ ತಾಳಿತು!

ಆ ವೃದ್ಧನ ಅಪೂರ್ವ ಸಿದ್ಧಿಯನ್ನು ಕಣ್ಣಾರೆ ಕಂಡು ಅಣ್ಣನು ಮೂಕವಿಸ್ಮಿತನಾದ. ಮುದುಕನ ಮೇಲೆ ಅವನಿಗೆ ಅಪಾರ ಗೌರವ ಮೂಡಿತು. ತಾನು ಮೊದಲು ಆಡಿದ ಮಾತಿಗೆ ಅಣ್ಣನು ತಾನೇ ನೊಂದುಕೊಂಡ. ಅವನು ಅಲ್ಲಿಯೇ ಒಂದೆರಡು ದಿನ ಉಳಿದು ಅರಮನೆಯ ವೈಭವದ ಸುಖವನ್ನು ಅನುಭವಿಸಿದ. ಆ ಮುದುಕ ಅಣ್ಣನಿಗೆ ಅರಮನೆಯಲ್ಲಿ ರಾತ್ರಿ ಮಲಗಲು ಹೇಳಿ ತಾನು ಮಾತ್ರ ತನ್ನ ಗುಡಿಸಲಿನಲ್ಲೇ ಮಲಗಿದ. ಮರುದಿನ ಸಿದ್ಧ ಸಾಧಕನು ಅಣ್ಣನಿಗೆ 'ಅಯ್ಯಾ! ಇನ್ನು ಐದು ದಿನಗಳಿಗೆ ನನ್ನ ಮರಣವೆಂದು ತಪಸ್ಸಿನ ಶಕ್ತಿಯಿಂದ ನನಗೆ ನಿನ್ನೆ ದೃಷ್ಟಾಂತವಾಗಿದೆ. ಅಲ್ಲಿಯವರೆಗೆ ನೀನು ಇಲ್ಲಿಯೇ ಇದ್ದು ನನಗೆ ಅಂತ್ಯಕ್ರಿಯೆಗಳನ್ನು ಮಾಡಿ ನಂತರ ಇಲ್ಲಿಂದ ಹೊರಡು. ನಾನು ನಾಲ್ಕನೆಯ ದಿನವೇ ನನ್ನ ಸಿದ್ಧಿ ಸಾಧನೆಗಳನ್ನು ನಿನಗೆ ಧಾರೆ ಎರೆದು ಕೊಡುತ್ತೇನೆ. ಇದಕ್ಕೆ ನೀನು ಒಪ್ಪಿಕೋ' ಎಂದು ನುಡಿದ. ಅಣ್ಣನಿಗೂ ಅದೇ ಬೇಕಾಗಿತ್ತು. ಅವನು ಆನಂದದಿಂದ ಒಪ್ಪಿಕೊಂಡ. ಅರಮನೆಯ ವೈಭೋಗದ ಸುಖವನ್ನು ಅನುಭವಿಸುತ್ತ ಅಲ್ಲಿಯೇ ಉಳಿದ.

ನಾಲ್ಕನೆಯ ದಿನ ಆ ಸಿದ್ಧ ಸಾದಕನು ಅರಮನೆಯನ್ನು ಅಣ್ಣನ ಅಂಗೈ ಮೇಲಿಟ್ಟು ಧಾರೆ ಎರೆದುಕೊಟ್ಟ. 'ಅಯ್ಯಾ! ಈ ಗೊಂಬೆ ಅರಮನೆಯನ್ನು ಜೋಪಾನವಾಗಿ ಕಾಪಾಡಿಕೋ. ಇದು ನಿನಗೆ ಮಾತ್ರ ಫಲ ಕೊಡುತ್ತದೆ. ಬೇರೆಯವರ ಕೈಯಲ್ಲಿ ಕೆಲಸ ಮಾಡುವುದಿಲ್ಲ. ಇದು ನಿನಗೆ ಸುಖ, ವೈಭೋಗವನ್ನು ಕೊಡುವುದೇ ಹೊರತು ಹಣವನ್ನು ನೇರವಾಗಿ ನೀಡುವುದಿಲ್ಲ. ಅದನ್ನು ತಿಳಿದು ನೀನು ಜಾಣ್ಮೆಯಿಂದ ಇದನ್ನು ಬಳಸಿ ಸುಖವನ್ನು ಪಡೆ, ಇದರಿಂದ ಹಣ ಗಳಿಸಲು ಪ್ರಯತ್ನಿಸ ಬೇಡ. ಇದರ ಒಳಗುಟ್ಟನ್ನು ಯಾರಿಗೂ ಹೇಳಬೇಡ. ನನ್ನ ಹೆಸರನ್ನೂ ಬಳಸಬೇಡ. ಪರರಿಗೆ ಉಪಕಾರಿಯಾಗಿ ಬಾಳು. ನೀನು ಅನ್ಯಾಯ, ಅಕ್ರಮಗಳನ್ನು ಮಾಡುತ್ತ ಬಾಳ್ವೆಯನ್ನು ಮಾಡಿದರೆ ಇದು ನಿನಗೂ ಫಲ ಕೊಡುವುದಿಲ್ಲ. ಇದೆಲ್ಲವನ್ನೂ ನೀನು ಗಮನದಲ್ಲಿಟ್ಟುಕೊಂಡು ಸುಖವಾಗಿ ಬಾಳು. ನಿನಗೆ ಒಳ್ಳೆಯದಾಗಲಿ' ಎಂದು ಹರಸಿದ. ಮರುದಿನ ಬೆಳಿಗ್ಗೆ ಆ ಸಿದ್ಧ ಸಾಧಕನು ತನ್ನ ದೇಹ ತ್ಯಾಗ ಮಾಡಿದ. ಅಣ್ಣನು ಅವನಿಗೆ ಶವಸಂಸ್ಕಾರವನ್ನು ಮಾಡಿ ನಂತರ ಕುದುರೆ ಏರಿ ನಗರಕ್ಕೆ ಹೋದ.

ಸಶೇಷ

**- ಶಿವಮೊಗ್ಗ ಗೀತಾಶಾಸ್ತ್ರಿ, ಬೆಂಗಳೂರು**

**ಕತೆ ಹೇಳಿದವರು: ದಿ. ಶಾರದಮ್ಮ, ಕೊಪ್ಪ**